ಅವರಿಷ್ಟ.. ಎಂದು ನೆಮ್ಮದ್ದಿಯ ನಿಟ್ಟುಸಿರಿಟ್ಟಿಳೇನೋ.

ಆದರೆ ನನ್ನ ಗೊಂದಲ.. ಹೆದರಿಕೆ ಯಾರಲ್ಲಿ ಹೇಳುವುದು?. ಅರಮನೆಯಾದರೂ... ಅದು ನನಗೆ ಹೊಸತು... ಅಡಿಯಿಂದ ಮುಡಿಯವರೆಗೆ ನನ್ನ ಬಂಗಾರದಲ್ಲಿ ಮುಳುಗಿಸಿದರೂ.. ಇವರ ತಾಯಿ.. ನನಗೆ ಅತ್ತೆ..! ಹೇಗೋ.. ಎಂತೋ ಗೊತ್ತಿಲ್ಲ... ಇವರು.. ಅಯ್ಯೋ ಇವರೇ ಅಪರಿಚಿತರು! ಇವರ ನೋಟವೊಂದೇ ಸಾಕಿತ್ತು. ನನ್ನಲ್ಲಿ ನಡುಕ ಹುಟ್ಟಿಸಲು.

ಕಣ್ಣಲ್ಲೇ ಬೆತ್ತಲಾಗಿಸುವ ತೀಕ್ಷ್ಣತೆ.... ಕೈ ಹಿಡಿದರೆ.... ಬೆರಳು ಮುರಿಯುವುದೇನೋ ಎನ್ನುವಷ್ಟು ಬಿಗಿ ಹಿಡಿತ. ರಾತ್ರಿ ಕಳೆಯುವುದು ಹೇಗೆ ಇವರೊಂದಿಗೆ ಎಂದು ಜೀವ ಢವಗುಟ್ಟುತ್ತಿತ್ತು.. ಎಲ್ಲರೂ ಅದರ ಅರಿವಿಲ್ಲದಂತೆ ಇದ್ದರು.. ನಂಗೆ ಹೆದರಿಕೆಯಾಗುತ್ತಿದೆ.. ಎಂದು ಹೇಳಲೂ ಯಾರೂ ಆತ್ಮೀಯರಿಲ್ಲ.. ಸ್ನೇಹಿತೆಯರೆಲ್ಲಾ ಹೋಗಿಯಾಗಿತ್ತು ಅಮ್ಮ.. ಅದೇಕೋ ದೂರ ದೂರವೇ ಉಳಿದರು.

ಅಜ್ಜಿ ನಿಮ್ಮ ಯಾವ ಶಾಸ್ತ್ರವೂ ಈಗ ನಂಗೆ ಬೇಡ.. ಬೆಳಗ್ಗೆ ಎಲ್ಲಾ ನೀವು ಹೇಳಿದಂತೆ ಎಲ್ಲಾ ಶಾಸ್ತ್ರವೂ ಆಯಿತು.. ಸಂಜೆ ಆರತಕ್ಷತೆ ಅಂತ ತಾತಾ, ಅಪ್ಪ, ಸೇರಿ ಕರೆದಿದ್ದ ಹಿಂಡು ಜನರ ಮುಂದೆ ಹಲ್ಲುಕಿರಿದ್ದಾಯ್ತು.. ಇನ್ನು ನನ್ನಿಷ್ಟ..

ಇವರ ಅರಮನೆಯಂಥ ಮನೆಯನ್ನು ಹೂಕ್ಕು.. ಎತ್ತ ಹೋಗುವುದು.. ಏನು ಮಾಡುವುದು ಎಂದು ತಬ್ಬಿಬ್ಬಾಗಿ ನಿಂತಿದ್ದ ನನ್ನನ್ನು ಅನಾಮತ್ತು ಎತ್ತಿಕೊಂಡು ಕೋಣೆಯತ್ತ ನಡೆದಿದ್ದರು ಇವರು.

ಎತ್ತ ನೋಡಲು ಗೊತ್ತಾಗದೆ, ಏನು ಮಾಡಲು ತೋಚದೆ, ನಾಚಿಕೆಯಿಂದ ಜೀವ ಹೋಗುತ್ತಿದೆ ಎನ್ನಿಸಿ ಇವರ ಎದೆಯಲ್ಲಿ ಮುಖ ಮರೆಸಿಕೊಂಡಿದ್ದೆ.

ನನ್ನ ಮುಗ್ಧತೆ, ನಾಚಿಕೆಯೇ ಇವರನ್ನು ಇನ್ನಷ್ಟು ಉದ್ರೇಕಿಸಿತು.

ಇವರು ಹೇಗೆ ಹೇಳಿದರೆ ಹಾಗೇ ನಡೆದುಕೊಂಡೆ, ನಾಚಿಕೆಯೆನ್ನಿಸಿದರೆ ಅವರ ಹರವಾದ ಎದೆಯಿತ್ತು ಮುಖ ಮುಚ್ಚಿಕೊಳ್ಳಲು..

ಸುತ್ತಲ ಪ್ರಪಂಚ ತಿಳಿಯದ, ಏನೂ ಹೆಚ್ಚು ಓದದ, ಸಂಸಾರ, ಒಡನಾಟ ಅಂದರೆ ಏನು ಎಂಬ ಅರಿವಿರದ ನಾನು ಆಗ ಸಂತೋಷದಿಂದಲೇ ಎಲ್ಲವನ್ನೂ ಒಪ್ಪಿಕೊಂಡಿದ್ದೆ. ಸ್ನೇಹಿತರ ಪೈಕಿ, ಬಂಧುಗಳ ಪೈಕಿ... ನಾನು ಕಂಡವರ ಪೈಕಿಯೇ.. ಅತ್ಯಂತ ಶ್ರೀಮಂತ, ಸ್ಫುರದ್ರೂಪಿ ಗಂಡಸು ನನ್ನ ಗಂಡನಾಗಿದ್ದ. ಕೆ.ಜಿ. ಗಟ್ಟಲೆ ಬಂಗಾರದ ಒಡವೆಗಳು ನನ್ನದಾಗಿದ್ದವು.. ಅಜ್ಜಿ, ಅತ್ತೆ, ಗಂಡ ಎಲ್ಲರೂ ತಮಗಿಷ್ಟವಾದ ಸೀರೆಗಳನ್ನು ತಂದು ನನ್ನ ಬೀರು ತುಂಬಿದ್ದರು.

ಅವಳ ಸೀರೆ, ಒಡವೆಗಳ ಲೆಕ್ಕಕ್ಕೇ ಒಬ್ಬ ಅಕೌಂಟೆಂಟರನ್ನು ನೇಮಿಸಬೇಕು ಅವಳ ಗಂಡ ಎಂದು ಅಮ್ಮ ಅವರಿವರಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಳು.

ಸೀರೆ, ಒಡವೆ, ಓಡಾಟ... ಸಮಯ ಕಳೆದಿದ್ದೇ ತಿಳಿಯಲಿಲ್ಲ... ನಂತರ ಬಸುರು... ಮುದ್ದು ಮಗ... ಬಾಣಂತನ ಬೊಂಬೆಯಂಥ ಮಕ್ಕಳು!.. ಬಾಣಂತನ.. ಮನೆ, ಅಜ್ಜಿ, ಅತ್ತೆ ಮಾವ, ಗಂಡ, ಅಷ್ಟೇ ಇತ್ತು ನನ್ನ ಪ್ರಪಂಚ. ಸಂತಸದಿಂದಲೇ ಇದ್ದೆ.

### ಗೆಳತಿ ನಿಶಾಳಿಂದ ಆಘಾತ

ಮೊದಲ ಏಟು ಬಿದಿದ್ದು. ಇವರ ಗೆಳತಿ ನಿಶಾ ಬಗ್ಗೆ ತಿಳಿದಾಗ.. ನನ್ನ ಪುಟ್ಟ ಪ್ರಪಂಚದಲ್ಲಿ ಅಂಧಕಾರ ಆವರಿಸಿಕೊಂಡಿತ್ತು. ನಾನು ದಡ್ಡಿ ಇದ್ದೆ ಅಷ್ಟೇ. ನಿಶಾ ಮೊದಲನೆಯ ಗೆಳತಿಯೇನಾಗಿರಲಿಲ್ಲ... ನಾನು ಅತ್ತು, ಕರೆದು, ಮನೆ ಬಿಟ್ಟು ಹೋಗಿ ರಂಪಾಟ ಮಾಡಿದರೂ ನಿಶಾ ಕೊನೆಯ ಗೆಳತಿಯಾಗಲಿಲ್ಲ. ಒಂದೊಂದೇ ಕನಸಿನ ಗುಳ್ಳೆ ಒಡೆಯುತ್ತಾ ಇಲ್ಲಿಗೆ ಬಂದು ನಿಂತಿದ್ದೇನೆ. ಇಷ್ಟೇ ಬದುಕು ಎಂದು ಒಪ್ಪಿಕೊಂಡು ಬಿಡಲು ಆಗುತ್ತಿಲ್ಲ... ಬೇರೆ ಇನ್ನೇನೊ ಇದೆ... ಎಂದು ಹುಡುಕುತ್ತಾ, ಇರುವುದನ್ನು ಬಿಟ್ಟು ಅರಿಸಿಕೊಂಡು ಹೋಗಲೂ ಧೈರ್ಯವಿಲ್ಲ.

ಸಂಜೆಯೇನೋ ಧೈರ್ಯವಾಗಿ, ಮಾತಿನ ಭರದಲ್ಲಿ ಬಿಡುಗಡೆ ಬೇಕು. ಎಂದೆ ಆದರೆ ಬಿಡುಗಡೆ ಕೊಟ್ಟುಬಿಟ್ಟರೆ... ಹೋಗು.. ನಿನ್ನಿಷ್ಟ ಎಂದು ಬಿಟ್ಟುಬಿಟ್ಟರೆ ಏನು ಮಾಡುವುದು.. ಎಲ್ಲಿಗೆ ಹೋಗುವುದು?

ತಣ್ಣನೆಯ ಗಾಳಿಯೊಂದಿಗೆ ಮುಖಕ್ಕೆ ಹೊಡೆದ ತಣ್ಣನೆಯ ನೀರು... ನೀರು!.. ಕಣ್ಣರಳಿಸಿದೆ.. ಮಳೆ..!. ಸಣ್ಣಗೆ ಮಳೆಯ ಹನಿಗಳು... ಗಾಳಿ ಬೀಸಿದತ್ತ ಹಾರುವ ಹನಿಗಳು.. ಗಾಳಿ ಬೀಸುತ್ತಿರುವುದು ನನ್ನಡೆಗೆ.. ಹಾಗಾಗಿ ಮುಖ, ಎದೆಯೆಲ್ಲಾ ಒದ್ದೆ.. ಹಿಂದೆ ಸರಿದು ಕಿಟಕಿ ಹಾಕಿ, ಕರ್ಟನ್ ಎಳೆದು ಮುಚ್ಚಿದೆ, ಕತ್ತಲಾವರಿಸಿತು. ಹೊರಗೂ ಕತ್ತಲೆಯೇ.... ಆದರೆ ಕಣ್ಣು



## ಇಲ್ಲಿಯವರೆಗೆ

ಎಲೆಕ್ಷನ್‌ಗೆ ನಿಲ್ಲುವ ಸಲುವಾಗಿ ಬೆಂಗಳೂರಿನಲ್ಲಿ ಪ್ರೆಸ್‌ಮೀಟ್ ನಡೆಸುತ್ತಾರೆ. 'ಪತ್ನಿಯೂ ಪ್ರೆಸ್‌ಮೀಟ್‌ನಲ್ಲಿ ಇರಬೇಕು' ಎಂದು ಗಂಡ ಹೇಳಿದ್ದರಿಂದ ಮಾವನ ಜತೆ ಕಾರಿನಲ್ಲಿ ಬೆಂಗಳೂರಿಗೆ ಹೋಗುತ್ತಾಳೆ. ಇತ್ತ ಸ್ತ್ರೀಶಕ್ತಿ ಸಂಘದಿಂದ ಗೊಂಬೆ ಮಾಡುವ ತರಬೇತಿ ನೀಡಲು ತಯಾರಿ ನಡೆಯುತ್ತದೆ. ಇದಕ್ಕೆ ಸಂಬಂಧಿಸಿದಂತೆ ನರಹರಿ ಹಾಗೂ ಮೀರಾ ಎಂಬವರಿಗೆ ಜವಾಬ್ದಾರಿ ವಹಿಸುತ್ತಾಳೆ. ಪ್ರೆಸ್‌ಮೀಟ್ ಮುಗಿದ ಮೇಲೆ ಹೋಟೆಲ್ ರೂಮ್‌ನಲ್ಲೇ ಆಕೆಯ ಗಂಡ ಇನ್ನೊಂದು ದಿನ ಇರುವಂತೆ ಹೇಳುತ್ತಾನೆ. ಮಾವ ವಾಪಸ್ ಬರುತ್ತಾರೆ. ಆಕೆಗೆ ಕ್ಷಣ ಕ್ಷಣವೂ ಒಂಟಿತನ ಕಾಡುತ್ತದೆ. ಆದರೂ ಅಳಬಾರದು, ಹೆಣ್ಣಿನ ದೌರ್ಬಲ್ಯ ತೋರಿಸಬಾರದು ಎಂದು ಕಂಟ್ರೋಲ್ ಮಾಡಿಕೊಳ್ಳುತ್ತಾಳೆ.

ಹಾಯಿಸಿದೆಡೆಯೆಲ್ಲಾ ಮಿನುಗುವ ದೀಪಗಳಿವೆ. ಎಲ್ಲಿ ಏನು ಎಂದು ತಿಳಿಯದಿದ್ದರೂ, ಬೆಳಕಿದೆ... ಕೋಣೆಯಲ್ಲಿ ಪೂರಾ ಕತ್ತಲೆ... ಹೊಸ ಜಾಗ, ದೀಪದ ಸ್ವಿಚ್ ಎಲ್ಲಿದೆ ಎಂದು ತಿಳಿಯದು... ತಡವರಿಸುತ್ತಾ ಹೋಗಿ.. ಹುಡುಕಿ ಅದುಮಿ ದೀಪ ಬೆಳಗಿಸಬೇಕು... ಆದರೆ ಈಗ ಈ ಸರಿ ರಾತ್ರಿ ದೀಪ ಹಚ್ಚಿದರೆ ನಿದ್ದೆ ಮಾಡುತ್ತಿರುವ ಇವರಿಗೆ ಎಚ್ಚರವಾಗುತ್ತದೆ.. ತಿರುಗಿ ನಿದ್ದೆ ಬರದಿದ್ದರೆ ನನ್ನ ಮೈ ಮೇಲೆ ಕೈಯಿ ಒಪ್ಪಿಸಿಕೊಳ್ಳುವ ಮನಸ್ಸಿಲ್ಲ... ಕೈ ಕಿತ್ತು ಹಾಕಲು ತಾಕತ್ತಿಲ್ಲ...

ಹೆಜ್ಜೆ ಮೇಲೆ ಹೆಜ್ಜೆ ಇಡುತ್ತಾ ಹೋಗಿ ಮಂಚದ ಒಂದು ಮೂಲೆಯಲ್ಲಿ ಮುದುಡಿ ಮಲಗಿದೆ. ದೇಹಕ್ಕೆ, ಮನಸ್ಸಿಗೆ ಎರಡಕ್ಕೂ ಆಯಾಸವಾಗಿತ್ತು. ಆಡಿದ ಮಾತು, ಕಾಡಿದ ನೆನಪು ದಟ್ಟವಾಗಿತ್ತು. ಆಡಿದ ಮಾತಿಗೆ ತಕ್ಕಂತೆ ಮುಂದಿನ ಬದುಕು ರೂಪಿಸಿಕೊಳ್ಳಬೇಕು ಎಂಬ ಆಶಯ ಬಲವಾಗಿ, ಕಣ್ಣು ಮುಚ್ಚಿದರೂ ನಿದ್ದೆಯಿಲ್ಲ.... ನಿದ್ದೆ ಬರಲು ಮನಸು ಹಗುರವಾಗಬೇಕು.. ಮನಸು ಹಗುರವಾಗಲು ಗೊಂದಲಗಳು ದೂರವಾಗಬೇಕು.. ಹಾಸಿಗೆಯ ಪಕ್ಕವಿದ್ದ ಪರ್ಸ್‌ಗೆ ತಡಕಿದೆ.. ಪರ್ಸ್ ಕೈಗೆ ಸಿಕ್ಕರೂ ಒಳಗೆ ಎಲ್ಲೊ ಇರುವ ನಿದ್ದೆ ಮಾತ್ರೆ ಹುಡುಕುವುದು ಹೇಗೆ ಕತ್ತಲೆಯಲ್ಲಿ..? ಪರ್ಸ್ ಕೈಗೆತ್ತಿಕೊಂಡು, ಮಂಚದಿಂದ ಇಳಿದು ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಬಾತ್‌ರೂಮಿಗೆ ಹೋದೆ... ಅಲ್ಲಿ ಲೈಟ್ ಹಾಕಿ, ಪರ್ಸ್‌ನ ಜಿಪ್ ತೆಗೆದು, ನಿದ್ರೆ ಮಾತ್ರೆ ಕೈಗೆತ್ತಿಕೊಂಡೆ. ಒಳ್ಳೆಯದಲ್ಲವಂತೆ.. ನಿದ್ದೆ ಮಾತ್ರೆ ತೆಗೆದುಕೊಳ್ಳುವುದು.. ನಿಜ ಅಭ್ಯಾಸ ಮಾಡಿಕೊಳ್ಳುವುದಿಲ್ಲ.. ಎಂದು ನನಗೆ ನಾನೇ ಹೇಳಿಕೊಂಡೆ, ಇಂದು ಎಂದಲ್ಲ... ಮಾತ್ರೆ ತೆಗೆದುಕೊಳ್ಳುವಾಗಲೆಲ್ಲಾ ಹಾಗೇ ಹೇಳಿಕೊಳ್ಳುತ್ತೇನೆ. ಆದರೆ ನಿದ್ರೆ ಬರದಿದ್ದರೆ ನಾನೇನು ಮಾಡಲಿ?

***

ಪ್ರೀತಿ ಹೇಳಿದ್ರು, ನೀವು ತುಂಬಾ ಫ್ರೆಂಡ್ಲಿ ಅಂತ.. ನೀವು ನೋಡಿದ್ರೆ ನಾನು ನಿಮ್ಮ ಊರಿಗೆ ಬರುತ್ತಿದ್ದ ಹಾಗೆ ಊರು ಬಿಟ್ಟು ಹೋಗಿಬಿಟ್ರಲ್ಲ..

ಹುಸಿಕೋಪದಿಂದ ಮುಖ ಊದಿಸಿಕೊಂಡ ವಿಶ್ವಾಸನತ್ತ ನೋಡಿದೆ.

ಯಾಕೆ?.. ಏನಾದ್ರು ಪ್ರಾಬ್ಲಂ ಆಯ್ತಾ?...

ಸಂಜೆಗತ್ತಲು ಮೂಡಿತ್ತು.. ತರಗತಿ ಮುಗಿಸಿಕೊಂಡು ಹೆಂಗಸರೆಲ್ಲಾ